ಮೂಸೆಯಲ್ಲಿ ಪಕ್ವಗೊಂಡ ತಾತ್ವಿಕ ಸಿದ್ಧಾಂತಗಳ ವಾರಸುದಾರರು ಎಂದು ತಿಳಿದುಕೊಂಡೆ. ಅಂತಹ ಮುಕ್ತ ಚಿಂತನೆಗಳಿಗೆ ಆ ಇಡೀ ಆರ್ಯ ಜನಾಂಗ ವೇದಿಕೆಯನ್ನು ಸಿದ್ಧಪಡಿಸಿದ್ದರಿಂದಲೇ ನಂತರದಲ್ಲಿ ಬೌದ್ಧತತ್ವಗಳು, ಜೈನರ ಚಿಂತನೆಗಳು, ಚಾರ್ವಾಕರ ಜೀವನಕ್ರಮಗಳು, ಅಜೈವಿಕರ ಸಿದ್ಧಾಂತಗಳು, ದ್ವೈತ ಅದ್ವೈತವೆಂಬ ಜಿಜ್ಞಾಸೆಗಳು ಸ್ವತಂತ್ರವಾಗಿ ಅರಳಿ ಬೆಳೆಯಲು ಸಾಧ್ಯವಾದದ್ದು. ಅಂತಹ ಅದ್ಭುತ ಆರ್ಯ ಸಂಸ್ಕೃತಿಯನ್ನು ಯುರೋಪಿನ ಜನ ಅದರಲ್ಲೂ ಜರ್ಮನ್ನರು ತಮ್ಮ ಕ್ಷುಲ್ಲಕ ಭಾವದಿಂದ ಅಪವಿತ್ರಗೊಳಿಸತೊಡಗಿದ್ದರು. ಅದೃಷ್ಟವಶಾತ್ ಸತ್ಯ ಮತ್ತು ಚರಿತ್ರೆ ಅವರ ಪರವಾಗಿ ನಿಲ್ಲಲಿಲ್ಲ ಎನ್ನುವುದು ಸಂತೋಷದ ವಿಷಯ.

ಇದೆಲ್ಲದರ ಅರಿವಾದಾಗ ನನಗೆ ನನ್ನ ಎಳೆ ಜೀವನ ಕೈಮೀರಿ ಹೋದದ್ದು ನನ್ನ ತಪ್ಪಲ್ಲ. ಬದಲಿಗೆ ನನ್ನನ್ನು ಖೆಡ್ಡಾಗೆ ತಳ್ಳಿದ ನಾಜಿ ಚಿಂತಕರ ಪಾಪಕೃತ್ಯದ ಪರಿಣಾಮ ಎಂದು ಸಮಾಧಾನವಾಯಿತು. ನನ್ನ ಮಗನಿಗೆ ಎಲ್ಲವನ್ನೂ ತಿಳಿಸಿ ಹೇಳಬಲ್ಲೆ ಎಂಬ ಧೈರ್ಯ ಹುಟ್ಟಿತ್ತು. ಅಲ್ಲದೆ ಲಾಸಾದ ವಿಹಾರದಲ್ಲಿ ದಕ್ಕಿದ ಬೌದ್ಧಿಕ ತರಬೇತಿಯಿಂದಾಗಿ ನನ್ನ ಮಗನನ್ನು ನಿರ್ಭಾವದಿಂದ ಎದುರಿಸಬಲ್ಲ ನಿರ್ವಾಣ ಸ್ಥಿತಿಯನ್ನೂ ಪಡೆದಿದ್ದೆ. ಹಾಗೆಂದೆ ಅಂದು ನನ್ನ ಮಗನನ್ನು ನೋಡಲು ಬಂದೆ. ಅವನ ಬದಲು ನಿನ್ನನ್ನು ಕಂಡೆ.

ನನಗೀಗ ಸುಮಾರು 65 ವರ್ಷ. ನಾನಿನ್ನು ಎಷ್ಟು ವರ್ಷ ಬದುಕಿರುತ್ತೇನೆ ಎಂದು ತಿಳಿಯದು. ನನ್ನ ಆರೋಗ್ಯ ಕೆಟ್ಟಿದೆ. ನನ್ನ ಅಂತ್ಯವನ್ನು ನಾನೇ ಕಾಣುತ್ತಿರುವಾಗಲೇ ಈ ಪತ್ರ ಬರೆಯುತ್ತಿದ್ದೇನೆ. ನಾನು ಸತ್ತ ನಂತರವೆ ನಿನಗೆ ಈ ಪತ್ರ ಮುಟ್ಟಿಸುವಂತೆ ಕೋರಿ, ನನ್ನ ಅಸ್ಥಿಯನ್ನೂ ಈ ಪತ್ರದೊಂದಿಗೆ ಕಳುಹಿಸುವ ವ್ಯವಸ್ಥೆ ಮಾಡಿದ್ದೇನೆ. ಅದನ್ನು ದಾಹ್ ಬಳಿ ಇರುವ ಸಿಂಧು ನದಿಯಲ್ಲಿ ತೇಲಿ ಬಿಡು.

ನನ್ನ ಚರಿತ್ರೆ ತಿಳಿದಮೇಲೆ, ನಿನ್ನ ಅಜ್ಜಿ ಲಜ್ಜೆಗೆಟ್ಟವಳು ಎಂದು ಅನಿಸಿದ್ದರೆ ಅದು ನಿನ್ನ ತಪ್ಪಲ್ಲ; ಈ ಎಲ್ಲ ವಿವರಗಳು ನಿನಗೆ ತಿಳಿಯದೆ ಇದ್ದಿದ್ದರೆ ನೆಮ್ಮದಿ ಇತ್ತು ಎಂದೂ ಯೋಚಿಸಿರಬಹುದು. ಈ ಅಜ್ಜಿ ನಾಚಿಕೆ ಇಲ್ಲದೆ ಮೊಮ್ಮಗನ ಬಳಿ ತನ್ನ ಕಳಂಕ ಜೀವನದ ಬಗ್ಗೆ ಹೇಳಿಕೊಂಡಳಲ್ಲ ಎಂದು ಬೇಸರವಾಗಿರಬಹುದು. ಚಿಂತೆಯಿಲ್ಲ. ಕಾರಣ ಎಲ್ಲವನ್ನೂ ಬಿಚ್ಚಿಟ್ಟು ಸತ್ಯ ಹೇಳಿದ ಹೆಮ್ಮೆ, ಗೆಲುವು ನನಗಿದೆ. ನಿನ್ನಜ್ಜಿಯ ಆ ಸತ್ಯ ಮುಖವನ್ನು ಮೆಚ್ಚುವೆಯೊ, ಅವಳ ಎಳೆವಯಸ್ಸಿನ ತಪ್ಪುಗಳ ಬಗ್ಗೆ ಮರುಕ ಪಡುವೆಯೊ, ಶಪಿಸುವೆಯೊ ನಿನಗೆ ಬಿಟ್ಟದ್ದು.

ಇಂತೀ ನಿನ್ನ ಅಜ್ಜಿ'

ಆ ಪತ್ರದ ಕೊನೆಯಲ್ಲಿ ದಿಂಗ್ಸೆ ಕೆಲವು ಸಾಲುಗಳ ಟಿಪ್ಪಣಿ ಬರೆದಿದ್ದರು:

'ಪ್ರೊಫೆಸರ್,

ಇದು ನಮ್ಮ ಅಜ್ಜಿಯ ಜೀವನ. ಒಂದು ವಿಷಯವನ್ನು ಗಮನಿಸಬೇಕು. ತಮ್ಮ ಇಡೀ ಜೀವನವನ್ನು ಚರಿತ್ರೆಯ ಈ ರಹಸ್ಯ ಭೇದಿಸಲೆಂದೆ ಅವರು ಮುಡಿಪಿಟ್ಟಂತೆ ತೋರುತ್ತದೆ. ತಮ್ಮ ಮೂಲದ ಬಗ್ಗೆ ಹುಸಿ ಪರಿಕಲ್ಪನೆ ಹೊತ್ತಿದ್ದ ಸ್ವಜನಾಂಗ ಮೋಹಿ ಜರ್ಮನ್ನರ ಈ ಷಡ್ಯಂತ್ರವು ಆಕೆಯ ಹುಡುಕಾಟದಿಂದ ಇತಿಹಾಸದ ಕಗ್ಗತ್ತಲಲ್ಲಿ ಕರಗಿ ಹೋಗದೆ ನಮ್ಮ ಮುಂದೆ ಎದ್ದು ನಿಂತಿದೆ. ಈ ಷಡ್ಯಂತ್ರದ ಕ್ಲಿಷ್ಟತೆಯನ್ನು ಗಮನಿಸಿದರೆ ಅದರ ಸತ್ಯಾಸತ್ಯತೆಯ ಬಗ್ಗೆ ಸಂಶಯ ಹುಟ್ಟುವುದು ಸಹಜ. ಹಾಗೆಂದೆ ನಮ್ಮ ಅಜ್ಜಿಯ ಪತ್ರದಲ್ಲಿನ ಹಲವು ವಿವರಗಳ ಬಗ್ಗೆ ನೀವು ಅನುಮಾನ ಪಟ್ಟಿರಲಿಕ್ಕೂ ಸಾಕು. ಆದರೆ ಜರ್ಮನ್ನರ ಈ ಆರ್ಯರಕ್ತದ ಬಗೆಗಿನ ವಿಕೃತ ಮೋಹ ಇನ್ನೂ ಸತ್ತಿಲ್ಲ ಎನ್ನುವುದಕ್ಕೆ ಈ ಕಣಿವೆಯಲ್ಲಿ ಈಗಲೂ ನಡೆಯುತ್ತಿರುವ ಕೆಲವು ಘಟನೆಗಳೆ